ಉ) ಸುಳ್ಳು ದಾಖಲಾತಿಗಳನ್ನು ಲಗತ್ತಿಸಿ ಅರ್ಜಿ ಸಲ್ಲಿಸಿದ್ದರೆ ಮಂಜೂರ ಮಾಡಲಾಗುವುದಿಲ್ಲ.

ಊ) ಅನರ್ಹವೆನಿಸಿದ ಪ್ರಕರಣಗಳಲ್ಲಿ ಈಗಾಗಲೇ ಮಾಸಾಶನವನ್ನು ರದ್ದುಗೊಳಿಸಲಾಗಿದೆ

**ಗೋವಾ ವಿಮೋಚನಾ ಚಳುವಳಿ ಹೆಸರಿನಲ್ಲಿ ಹಣದ ಲೂಟಿ.**

226 - ಶ್ರೀ ಕೆ. ಲಕ್ಷ್ಮಣ್ಣ (ರಾಜಾಜಿನಗರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೋವಾ ವಿಮೋಚನಾ ಚಳುವಳಿ ಹೆಸರಿನಲ್ಲಿ ಮಾಸಾಶನ ಕೊಡಿಸುವುದಾಗಿ ಮುಗ್ಧ ಜನರಿಂದ ದಲ್ಲಾಳಿಗಳು ಹಣ ದೋಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಆ ವ್ಯಕ್ತಿ ತನ್ನ ಜೊತೆ ಜೈಲಿನಲ್ಲಿದ್ದ ಎಂದು ಕೆಲವು ಜನರು ಕೊಡುತ್ತಿರುವ ಸುಳ್ಳು ಸರ್ಟಿಫಿಕೇಟನ್ನೇ ಆಧರಿಸಿ ಮಾಸಾಶನ ಮಂಜೂರಾತಿ ಮಾಡುವ ಕ್ರಮ ಸರ್ಕಾರದಲ್ಲಿರುವುದೇ;

ಇ) ಮಾಸಾಶನ ಕೊಡಿಸುವ ಆಸೆ ಹುಟ್ಟಿಸಿ ಅನೇಕ ವಿಜೆಂಟರು ಮುಗ್ಧ ಜನರಿಂದ ಹಣ ಲೂಟಿ ಮಾಡುತ್ತಿರುವುದನ್ನು ತಪ್ಪಿಸಲು ಸರ್ಕಾರ ಯೋಚಿಸಿದೆಯೇ;

ಈ) ಬಂದಿರುವ ಅಂತಹ ಅರ್ಜಿಗಳನ್ನು ಕೂಲಂಕಶವಾಗಿ ಪರಿಶೀಲಿಸಿ ಕೇವಲ ಅರ್ಹ ವ್ಯಕ್ತಿಗಳಿಗೆ ಮಾತ್ರ ಮಂಜೂರಾತಿ ನೀಡುವಂತೆ ಸರ್ಕಾರ ಆದೇಶ ನೀಡುತ್ತಿದೆಯೇ ;

ಉ) ಈ ಮಾಸಾಶನವನ್ನು ರದ್ದುಮಾಡುವ ಮೂಲಕ ಹಣದ ಲೂಟಿಯನ್ನು ತಪ್ಪಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು.) :

ಅ) ಇಲ್ಲ.

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.

ಈ) ಅರ್ಹ ಸ್ವಾತಂತ್ರ್ಯ ಹೋರಾಟಗಾರರಿಗೆ ಮಾತ್ರ ಮಾಸಾಶನ ಮಂಜೂರ ಮಾಡಲಾಗುತ್ತಿದೆ.

ಉ) ಉದ್ಭವಿಸುವುದಿಲ್ಲ.

**ವಿಧಾನ ಸೌಧ ಒಳ ಆವರಣದಲ್ಲಿ ಲಕ್ಷಾಂತರ ರೂ ಬೆಲೆ ಬಾಳುವ ಪೀಠೋಪಕರಣ ಬಿದ್ದಿರುವುದರ ಬಗ್ಗೆ**

228- ಶ್ರೀ ಕೆ.ಲಕ್ಷ್ಮಣ್ಣ (ರಾಜಾಜಿನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಧಾನ ಸೌಧದ ಒಳ ಆವರಣದಲ್ಲಿ ಲಕ್ಷಾಂತರ ರೂ. ಬೆಲೆಬಾಳುವ ಪೀಠೋಪಕರಣಗಳು ಬಿಸಿಲು ಮಳೆಯಿಂದ ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ, ಅವುಗಳನ್ನು ಬಿಸಿಲು ಮಳೆಯಿಂದ ರಕ್ಷಿಸುವ ಕ್ರಮವನ್ನು ಸರ್ಕಾ ಕೈಗೊಳ್ಳುವುದೇ?

ಇ) ಇನ್ನು ಮುಂದೆ ಹೊಸ ಪೀಠೋಪಕರಣಗಳನ್ನು ಖರೀದಿಸುವ ಬದಲು ಈ ಪೀಠೋಪರಣಗಳನ್ನೇ ದುರಸ್ಥಿಪಡಿಸಿ ಸದುಪಯೋಗಪಡಿಸಿಕೊಳ್ಳುವಂ ಸಂಬಂಧಪಟ್ಟವರಿಗೆ ಸರ್ಕಾರ ಆದೇಶಿಸುವುದೇ?

ಈ) ದುರಸ್ಥಿ ಮಾಡಲು ಸಾಧ್ಯವಿಲ್ಲದಿದ್ದಲ್ಲಿ ಅವು ಪೂರ್ಣ ಹಾಳಾಗುವುದಕ್ಕೆ ಮುಂಚೆಯೇ ಹರಾಜು ಮಾಡಿದರೆ ಸಾಕಷ್ಟು ಹಣ ಸರ್ಕಾರಕ್ಕೆ ಬರುವುದರಿಂದ ಸರ್ಕಾರ ಆ ಬಗ್ಗೆ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):

ಅ) ವಿಧಾನ ಸೌಧದ ಒಳಾಂಗಣದಲ್ಲಿ ಕೆಲವು ಮುರಿದು ಹೋಗಿರುವ ಉಪಯೋಗಿಸಲಾಗದಂತಹ ಪೀಠೋಪಕರಣಗಳು ಇರುವುದು ಸರ್ಕಾರಕ್ಕೆ ತಿಳಿದಿದೆ. ಆದರೆ ಇವು ಬಿಸಿಲು ಮಳೆಯಿಂದ ಹಾಳಾಗುತ್ತಿವೆ ಎಂಬ ಅಭಿಪ್ರಾಯ ಸರಿಯಲ್ಲ. ಏಕೆಂದರೆ ರಿಪೇರಿ ಆಗಬೇಕಿರುವ ಬಹಳಷ್ಟು ಪೀಠೋಪಕರಣಗಳನ್ನು ಉಗ್ರಾಣದಲ್ಲಿರಿಸಿದ್ದು, ಉಗ್ರಾಣವು ಭರ್ತಿ ಆಗಿರುವ ಕಾರಣ, ಕೆಲವನ್ನು ಮಾತ್ರ ಆಚೆ ಇಟ್ಟಿದೆ. ಇವುಗಳಲ್ಲಿ ಯಾವುದನ್ನು ರಿಪೇರಿ ಮಾಡಿಸಿ ಉಪಯೋಗಿಸಬಹುದೋ ಅಂತವುಗಳನ್ನು ರಿಪೇರಿ ಮಾಡಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಈ ದಿಸೆಯಲ್ಲಿ ಬಂಧೀಖಾನೆ ಇಲಾಖೆಯನ್ನು ಈ ಎಲ್ಲಾ ಪೀಠೋಪಕರಣಗಳನ್ನು ತೆಗೆದುಕೊಂಡು ಹೋಗಿ ರಿಪೇರಿ ಮಾಡುವುದು ಮತ್ತು ಸಾಧ್ಯವಿಲ್ಲದವುಗಳನ್ನು ಹರಾಜು ಹಾಕಲು ಕ್ರಮ ತೆಗೆದುಕೊಳ್ಳುವಂತೆ ಆದೇಶಿಸಲಾಗಿದೆ.

**ರಾಜ್ಯದಲ್ಲಿ ಟಾಡಾ ಕಾಯಿದೆ ಅನ್ವಯ ಮೊಕದ್ದಮೆಗಳ ದಾಖಲಾತಿ**

225-ಶ್ರೀ ಬಸವರಾಜರಾಯರೆಡ್ಡಿ (ಯಲಬುರ್ಗ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1990-91, 1991-92, 1992-93, 1993-94ನೇ ಸಾಲಿನಲ್ಲಿ ಟಾಡಾ ಕಾಯಿದೆ ಅನ್ವಯ ರಾಜ್ಯದಲ್ಲಿ ಐ.ಎ.ಎಸ್., ಐ.ಪಿ.ಎಸ್. ಕೆ.ಎ.ಎಸ್. ಅಧಿಕಾರಿಗಳು, ಸಂಸತ್ ಸದಸ್ಯರು ಹಾಗೂ ಶಾಸಕರುಗಳ ಮೇಲೆ ಮೊಕದ್ದಮೆಗಳನ್ನು ದಾಖಲು ಮಾಡಲಾಗಿದೆಯೇ.

ಆ) ರಾಯಚೂರು ಜಿಲ್ಲೆಯಲ್ಲಿ ಟಾಡಾ ಕಾಯ್ದೆಯನ್ವಯ ಸಿ.ಒ.ಡಿ. ಇಲಾಖೆಯವರು ಸಂಸತ್ ಸದಸ್ಯರು, ಶಾಸಕರು, ಹಾಗೂ ಐ.ಎ.ಎಸ್. ಐ.ಪಿ.ಎಸ್. ಕೆ.ಎ.ಎಸ್. ಹಾಗೂ ಇನ್ನಿತರ ಅಧಿಕಾರಿಗಳ ಮೇಲೆ (ಟಾಡಾ ಕಾಯ್ದೆ) ಮೊಕದ್ದಮೆ ಹೂಡಿರುವರೇ?

ಇ) ಹಾಗಿದ್ದಲ್ಲಿ, ಅವರುಗಳ ಮೇಲೆ ಕಾನೂನಿನ ಅನ್ವಯ ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):

ಅ) 1990-91, 1991-92, 1992-93ನೇ ಸಾಲಿನಲ್ಲಿ ಟಾಡಾ ಕಾಯಿದೆಯನ್ವಯ ರಾಜ್ಯದಲ್ಲಿನ ಐ.ಎ.ಎಸ್., ಐ.ಪಿ.ಎಸ್., ಕೆ.ಎ.ಎಸ್. ಅಧಿಕಾರಿಗಳು, ಸಂಸತ್ ಸದಸ್ಯರು ಹಾಗೂ ಶಾಸಕರುಗಳ ಮೇಲೆ ಮೊಕದ್ದಮೆಗಳನ್ನು ದಾಖಲು ಮಾಡಿಲ್ಲ.

ಆದರೆ 1993-94ನೇ ಸಾಲಿನಲ್ಲಿ ದಿನಾಂಕ 23-1-1994ರಂದು ರಾಯಚೂರಿನ ಸದರ್ ಬಜಾರ್‌ಪೊಲೀಸ್ ಠಾಣೆಯಲ್ಲಿ ರಾಜ್ಯದ ಕೆಲವು ಉನ್ನತ ಅಧಿಕಾರಿಗಳು ಹಾಗೂ ಒಬ್ಬರು ರಾಜ್ಯಸಭಾ ಸದಸ್ಯರ ವಿರುದ್ಧ ಐ.ಪಿ.ಸಿ. ಮತ್ತು ಟಾಡಾ ಕಾಯಿದೆಯನ್ವಯ ಪ್ರಥಮ ವರ್ತಮಾನ ವರದಿಯು ದಾಖಲಾಗಿರುತ್ತದೆ.

ಆ) ಈ ಪ್ರಕರಣವನ್ನು ಸತ್ರ ನ್ಯಾಯಾಧೀಶರು, ರಾಯಚೂರು ಅವರ ಸೂಚನೆ ಮೇರೆಗೆ ಆರಕ್ಷಕ ಮಹಾನಿರ್ದೇಶಕರು ಮತ್ತು ಮಹಾನಿರೀಕ್ಷಕರು, ಕರ್ನಾಟಕ ರಾಜ್ಯ ಇವರು ಕಲಂ 158(3) ದಂಡ ಪ್ರಕ್ರಿಯಾ ಸಂಹಿತೆ ಪ್ರಕಾರ ತನಿಖೆ ಕೈಗೊಳ್ಳಲು ಸಿ.ಒ.ಡಿ.ಗೆ ವಹಿಸಿರುತ್ತಾರೆ. ಪ್ರಕರಣವನ್ನು ನ್ಯೋಂದಾಯಿಸಿ ತನಿಖೆಯನ್ನು ನಡೆಸುತ್ತಿರುತ್ತಾರೆ.